# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ-574199

ಸಂ: ಮಂವಿ/ಶೈಕ್ಷಣಿಕ/ಘಟಿಕೋತ್ಸವ36/ಸಿಆರ್50/2017-18/ಎ2

ದಿನಾಂಕ: 15/12/2017

## ಅಧಿಸೂಚನೆ

## ಮಂಗಳೂರು ವಿಶ್ವವಿದ್ಯಾನಿಲಯದ ಮೂವತ್ತಆರನೇಯ ವಾರ್ಷಿಕ ಘಟಿಕೋತ್ಸವ

1. ಮಂಗಳೂರು ವಿಶ್ವವಿದ್ಯಾನಿಲಯದ ಮೂವತ್ತಆರನೇಯ ವಾರ್ಷಿಕ ಘಟಿಕೋತ್ಸವವನ್ನು 2018ನೇ ಜನವರಿ/ ಫೆಬ್ರವರಿ ತಿಂಗಳಲ್ಲಿ ಏರ್ಪಡಿಸಲು ಉದ್ದೇಶಿಸಲಾಗಿದೆ. ನಿಖರವಾದ ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದು.

2. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ, ಘಟಕ ಮತ್ತು ಸ್ವಾಯತ್ತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ದಿನಾಂಕ 31-10-2017 ರೊಳಗೆ ವಿವಿಧ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳು ಈ ಘಟಿಕೋತ್ಸವದಂದು ಪದವಿ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಕೆಳಕಂಡ ಅಭ್ಯರ್ಥಿಗಳು ಮಾತ್ರ **'ಘಟಿಕೋತ್ಸವಕ್ಕೆ ಪ್ರವೇಶ'** ಪಡೆಯಲು ಅರ್ಹರು.

   ಅ) ಎಲ್ಲಾ ಸ್ನಾತಕೋತ್ತರ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳು
   ಆ) ಡಾಕ್ಟರೇಟ್ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳು
   ಇ) ಸ್ನಾತಕೋತ್ತರ ಮತ್ತು ಪದವಿ ಮಟ್ಟದಲ್ಲಿ ಪದಕ/ ಬಹುಮಾನ ಪಡೆಯಲು ಅರ್ಹರಾದ ಅಭ್ಯರ್ಥಿಗಳು
   ಈ) ಪದವಿ ಮಟ್ಟದ ಎಲ್ಲಾ ನಿಕಾಯಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡ ಅಭ್ಯರ್ಥಿಗಳು
   ಉ) ಮಂಗಳೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾ ವಿನಿಯಮದ ಪ್ರಕಾರ ವ್ಯಾಸಂಗ ಮಾಡಿ ಸ್ನಾತಕೋತ್ತರ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳು ಹಾಗೂ ಪದವಿ ಮಟ್ಟದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡ ಅಭ್ಯರ್ಥಿಗಳು

3. ಬಿ.ಪಿ.ಎಡ್. ಮತ್ತು ಬಿ.ಎಡ್. ಪದವೀಧರರನ್ನು ಸ್ನಾತಕೋತ್ತರ ವಿದ್ಯಾರ್ಥಿಗಳೆಂದು ಪರಿಗಣಿಸಲಾಗುವುದಿಲ್ಲ. ಈ ವಿಷಯದಲ್ಲಿ ಪದಕ/ ಬಹುಮಾನ ಪಡೆಯಲು ಅರ್ಹರಾದ ಮತ್ತು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಮಾತ್ರ ಘಟಿಕೋತ್ಸವಕ್ಕೆ ಪ್ರವೇಶ ಪಡೆಯಲು ಅರ್ಹರು.

4. ಅಭ್ಯರ್ಥಿಗಳು ಈ ಹಿಂದೆ ಕಲಿತ ಕಾಲೇಜುಗಳ ಪ್ರಾಂಶುಪಾಲರಿಂದ/ ವಿಭಾಗಗಳ ಅಧ್ಯಕ್ಷರಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಂಡು 'ಹಾಜರಿ' ಅಥವಾ 'ಗೈರುಹಾಜರಿ' ಯಲ್ಲಿ ಪದವಿಯನ್ನು ಪಡೆಯಬಹುದು. ಘಟಿಕೋತ್ಸವಕ್ಕೆ ಪ್ರವೇಶ ಪಡೆಯಲು ಅರ್ಹರಲ್ಲದ ಆದರೆ ದಿನಾಂಕ 31-10-2016 ರೊಳಗೆ ವಿವಿಧ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳು 'ಗೈರುಹಾಜರಿ'ಯಲ್ಲೇ ಪದವಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಬಹುದು. **ಸ್ವಾಯತ್ತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಪದವಿ ಪಡೆಯಲು ಅರ್ಹರಾದ ಅಭ್ಯರ್ಥಿಗಳು ಅರ್ಜಿಗಳನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳ ಮುಖಾಂತರವೇ ಸಲ್ಲಿಸಬೇಕು.**

5. ಅರ್ಜಿಗಳಲ್ಲಿ 'ಹಾಜರಿ' ಎಂದು ನಮೂದಿಸಿದ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ಮುಗಿದ ಕೂಡಲೇ ವಿತರಿಸಲಾಗುವುದು. 'ಗೈರುಹಾಜರಿ' ಎಂದು ನಮೂದಿಸಿದ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಅಂಚೆ ಮೂಲಕ ಕಳುಹಿಸಿ ಕೊಡಲಾಗುವುದು.

6. <u>ಪದವಿ ಪಡೆಯಲು ಶುಲ್ಕದ ವಿವರಗಳು ಈ ಕೆಳಗಿನಂತಿದೆ:</u>

| | **ಸಾಮಾನ್ಯ ವರ್ಗದ ವಿದ್ಯಾರ್ಥಿಗಳು** | | | **ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳು** | | |
|---|---|---|---|---|---|---|
| | **ಪದವಿ ಪ್ರಮಾಣ ಪತ್ರ ಶುಲ್ಕ (ರೂ.)** | **ಅರ್ಜಿ ಶುಲ್ಕ (ರೂ.)** | **ಒಟ್ಟು (ರೂ.)** | **ಪದವಿ ಪ್ರಮಾಣ ಪತ್ರ ಶುಲ್ಕ (ರೂ.)** | **ಅರ್ಜಿ ಶುಲ್ಕ (ರೂ.)** | **ಒಟ್ಟು (ರೂ.)** |
| ಪದವಿಮಟ್ಟ | 690.00 | 100.00 | **790.00** | 345.00 | 100.00 | **445.00** |
| ಸ್ನಾತಕೋತ್ತರ ಪದವಿ | 900.00 | 100.00 | **1,000.00** | 450.00 | 100.00 | **550.00** |
| ಪಿಎಚ್.ಡಿ/ಎಂ.ಫಿಲ್ | 1,850.00 | 100.00 | **1,950.00** | 925.00 | 100.00 | **1,025.00** |
| ಡಿ.ಎಸ್ಸಿ/ ಡಿ.ಲಿಟ್ | 2,900.00 | 100.00 | **3,000.00** | 1,450.00 | 100.00 | **1,550.00** |

7. ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗಳ ಮುಖಾಂತರ ವಿಶ್ವವಿದ್ಯಾನಿಲಯದ ನಿಧಿಗೆ ಜಮೆಯಾಗುವಂತೆ ಡಿ.ಡಿ/ ಚಲನ್ ಮೂಲಕ ಪಾವತಿಸಬಹುದಾಗಿದೆ.

8. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದೃಢೀಕರಿಸಿದ ಜಾತಿ ಪ್ರಮಾಣ ಪತ್ರವನ್ನು ಅರ್ಜಿಯ ಜೊತೆ ಲಗತ್ತಿಸಬೇಕು.

9. ಪಿಎಚ್.ಡಿ/ ಡಿ.ಎಸ್ಸಿ/ ಡಿ.ಲಿಟ್ ಪದವಿಯನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳು ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸಬೇಕು.

10. ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿತ ಶುಲ್ಕದೊಂದಿಗೆ **ದಿನಾಂಕ 10-01-2018 ರೊಳಗೆ** ತಲುಪುವಂತೆ ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-574199 ಇವರಿಗೆ ಕಳುಹಿಸಬೇಕು.

Sd/- 15/12/17

ಕುಲಸಚಿವರು

ಇವರಿಗೆ:

1. ಅಧ್ಯಕ್ಷರು, ಎಲ್ಲಾ ಸ್ನಾತಕೋತ್ತರ ವಿಭಾಗಗಳು/ ಸಂಯೋಜಕರು, ಸಂಬಂಧಪಟ್ಟ ಕೋರ್ಸುಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ/ ಮಂಗಳೂರು/ ಮಡಿಕೇರಿ/ ಚಿಕ್ಕ ಅಳುವಾರ.
2. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ/ ಘಟಕ/ ಸ್ವಾಯತ್ತ ಕಾಲೇಜುಗಳು ಮಂಗಳೂರು ವಿಶ್ವವಿದ್ಯಾನಿಲಯ.

(1–2:) ಸ್ನಾತಕೋತ್ತರ ವಿದ್ಯಾರ್ಥಿಗಳ ಅವಗಾಹನೆಗೆ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂಬ ವಿನಂತಿ ಮೇರೆಗೆ

3. ಸಂಪರ್ಕಾಧಿಕಾರಿ, ವಿಶ್ವವಿದ್ಯಾನಿಲಯ ಮಾಹಿತಿ ಕೇಂದ್ರ, ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು.
4. ಸಿಂಡಿಕೇಟು ಮತ್ತು ಶೈಕ್ಷಣಿಕ ಮಂಡಳಿಯ ಸದಸ್ಯರುಗಳು.
5. ಕುಲಸಚಿವರು (ಪರೀಕ್ಷಾಂಗ)/ಹಣಕಾಸಿನ ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6. ಗ್ರಂಥಪಾಲಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ.
9. ಸಹಾಯಕ ನಿರ್ದೇಶಕರು, ಪ್ರಚಾರ ಮತ್ತು ಮಾಹಿತಿ ಇಲಾಖೆ, ಮಂಗಳೂರು- ಎಲ್ಲಾ ವಾರ್ತಾ ಪತ್ರಿಕೆಗಳಲ್ಲಿ ವಾರ್ತಾ ವಿಷಯವಾಗಿ ಪ್ರಕಟಿಸಬೇಕೆಂಬ ವಿನಂತಿ ಮೇರೆಗೆ.
10. ನಿಲಯ ನಿರ್ದೇಶಕರು, ಆಕಾಶವಾಣಿ, ಮಂಗಳೂರು- ಸುದ್ದಿ ರೂಪದಲ್ಲಿ ಬಿತ್ತರಿಸಬೇಕೆಂಬ ಕೋರಿಕೆ ಮೇರೆಗೆ.
11. ಉಪಕುಲಸಚಿವರು/ಸಹಾಯಕ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
12. ನಿರ್ದೇಶಕರು, ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ/ ಕಾಲೇಜು ಅಭಿವೃದ್ಧಿ ಪರಿಷತ್ತು/ ವಿದ್ಯಾರ್ಥಿ ಕ್ಷೇಮಪಾಲನೆ/ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ ಗಣಕ ಕೇಂದ್ರ/ ವಿಜ್ಞಾನ ಉಪಕರಣಗಳ ಕೇಂದ್ರ/ ಮೈಕ್ರೋಟೋನ್/ ಓಎಎಸ್‌ಟಿಸೆಲ್/ ಪ. ಜಾತಿ -ಪ. ಪಂಗಡ ಘಟಕ/ ಓಬಿಸಿ ಘಟಕ/ ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ.
13. ನಿರ್ದೇಶಕರು/ ಸಂಯೋಜಕರು, ಎಲ್ಲಾ ಅಧ್ಯಯನ ಕೇಂದ್ರಗಳು ಮತ್ತು ದತ್ತಿಪೀಠಗಳು, ಮಂ. ವಿಶ್ವವಿದ್ಯಾನಿಲಯ.
14. ಮುಖ್ಯಸ್ಥರು, ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ, ಮಂ. ವಿಶ್ವವಿದ್ಯಾನಿಲಯ.
15. ಸಂಯೋಜಕರು, ರಾಷ್ಟ್ರೀಯ ಸೇವಾ ಯೋಜನೆ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು- 1.
16. ವಿಶೇಷಾಧಿಕಾರಿ, ಕುಲಪತಿಯವರ ಕಾರ್ಯಾಲಯ/ ಕುಲಸಚಿವರ ಕಚೇರಿ/ಕುಲಸಚಿವರು (ಪರೀಕ್ಷಾಂಗ)/ (ಪ. ಜಾತಿ/ಪ. ಪಂಗಡ ಘಟಕ), ಮಂಗಳೂರು ವಿಶ್ವವಿದ್ಯಾನಿಲಯ.
17. ಸಹಾಯಕ ಕುಲಸಚಿವರು, ಪರೀಕ್ಷಾಂಗ/ ಹಣಕಾಸು ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.
18. ಕುಲಪತಿಯವರ ಆಪ್ತ ಕಾರ್ಯದರ್ಶಿಯವರು/ಕುಲಸಚಿವರ ಆಪ್ತ ಸಹಾಯಕರು, ಮಂ. ವಿಶ್ವವಿದ್ಯಾನಿಲಯ.
19. ಸಾರ್ವಜನಿಕ ಸಂಪರ್ಕಾಧಿಕಾರಿ, ಕುಲಸಚಿವರ ಕಚೇರಿ/ ಕುಲಸಚಿವರು (ಪರೀಕ್ಷಾಂಗ) ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
20. ಎಲ್ಲಾ ಅಧೀಕ್ಷಕರುಗಳು, ಕುಲಸಚಿವರ ಕಚೇರಿ/ಕುಲಸಚಿವರು (ಪರೀಕ್ಷಾಂಗ)/ಹಣಕಾಸಿನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.
21. ಸೂಚನಾ ಫಲಕ.